**ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ**

**ಹೂವಿನಹಡಗಲಿ**

**ಅಸಲು ದಾವೆ ನಂ : 57/2015**

**ಪಿಡಬ್ಲೂ : 01**

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕ : 21-06-2018 ರಂದು ಸತ್ಯ ಪ್ರತಿಜ್ಞೆಯನ್ನು ಬೋದಿಸಲಾಯಿತು.

ಪಾಟಿ ಸವಾಲು : ಪ್ರತಿವಾದಿ ಪರ ಶ್ರೀ ಎಸ್ ಎಚ್ ಸಿ ವಕೀಲರಿಂದ :

ನನ್ನ ಅಜ್ಜನ ಹೆಸರು ಬಸಪ್ಪ. ಬಸಪ್ಪ ಅವರಿಗೆ ನನ್ನ ತಂದೆ ರಾಮಪ್ಪ ಎಂಬ ಒಬ್ಬನೇ ಮಗ ಇದ್ದನು. ರಾಮಪ್ಪನಿಗೆ ಸಣ್ಣನಾಗಮ್ಮ, ದೊಡ್ಡನಾಗಮ್ಮ ಮತ್ತು ಭದ್ರಮ್ಮ ಎಂಬ ಅಕ್ಕ-ತಂಗಿ ಇದ್ದರು. ನನ್ನ ಅಜ್ಜ ತೀರಿಕೊಂಡು ತುಂಬಾ ವರ್ಷವಾಗಿರುತ್ತದೆ. ನನಗೆ ವರ್ಷ ನೆನಪಿಲ್ಲ. ರಾಮಪ್ಪನಿಗೆ ನಾವು ಐದು ಜನ ಗಂಡು ಮಕ್ಕಳು ಇರುತ್ತೇವೆ. ಅವರುಗಳು ಹನಮಂತಪ್ಪ, ಬಜ್ಜಪ್ಪ , ದಾನಪ್ಪ, ರೇವಣೆಪ್ಪ, ತುಮನೇಪ್ಪ.

2. ನನ್ನ ತಂದೆ ತೀರಿಕೊಂಡು 20 ವರ್ಷದ ಮೇಲಾಗಿ ಇರುತ್ತದೆ. ಈ ದಾವೆಯನ್ನು ನಾನು ಪಾಲುವಿಭಾಗ ಕೇಳಿ ಹಾಕಿರುತ್ತೇನೆ. ದಾವಾಆಸ್ತಿಗಳು ಮೂಲತಃವಾಗಿ ನನ್ನ ಅಜ್ಜನಿಗೆ ಸಂಬಂಧಿಸಿದ್ದು ಆಗಿರುತ್ತದೆ ನಂತರ ನನ್ನ ತಂದೆಗೆ ಬಂದಿರುತ್ತದೆ. ಈ ದಾವೆಯನ್ನು ನಾನು ಸರ್ವೆ ನಂ : 15 ಬಿ/1 11 ಎಕರೆ 56 ಸೆಂಟ್ಸು, ಸರ್ವೆ ನಂ : 15 ಎ/1 ವಿಸ್ತೀರ್ಣ 1 ಎಕರೆ 49 ಸೆಂಟ್ಸು, ಸರ್ವೆ ನಂ : 3 ಸಿ 5 ಎಕರೆ 26 ಸೆಂಟ್ಸು, ಸರ್ವೆ ನಂ : 3 ಡಿ 15 ಸೆಂಟ್ಸು ಕಣ, ಸರ್ವೆ ನಂ : 3 ಬಿ 6 ಎಕರೆ 30 ಸೆಂಟ್ಸು, ಸರ್ವೆ ನಂ : 3 ಎ 2 ಎಕರೆ 81 ಸೆಂಟ್ಸು, ಸರ್ವೆ ನಂ : 149 2 ಎಕರೆ 90 ಸೆಂಟ್ಸು, ಸರ್ವೆ ನಂ : 127 10 ಎಕರೆ ಹೊಲ ಆಗಿರುತ್ತದೆ. ಈ ಎಲ್ಲಾ ಆಸ್ತಿಗಳು ಯಾರ ಹೆಸರಿನಲ್ಲಿ ಇದ್ದವು ಅಂದರೆ ನನ್ನ ತಂದೆಯ ಹೆಸರಿಗೆ ಇದ್ದವು ಕೊಂಡು ಕೊಂಡಂತಾ ಆಸ್ತಿಗಳು ನನ್ನ ಅಣ್ಣ ಮತ್ತು ನನ್ನ ತಮ್ಮ ದಾನಪ್ಪನ ಹೆಸರಿನಲ್ಲಿ ಇದ್ದವು.

3. ನನ್ನ ಅಣ್ಣನಾದ ಹನುಮಂತಪ್ಪನ ಹೆಸರಿಗೆ 6 ಎಕರೆ 30 ಸೆಂಟ್ಸು, 2 ಎಕರೆ 81 ಸೆಂಟ್ಸು, 2 ಎಕರೆ 90 ಸೆಂಟ್ಸು ಮತ್ತು 5 ಎಕರೆ ನನ್ನ ತಮ್ಮ ದಾನಪ್ಪನ ಹೆಸರಿಗೆ ಇರುತ್ತದೆ. ಈ ಆಸ್ತಿಗಳನ್ನು 30 ರಿಂದ 35 ವರ್ಷಗಳ ಹಿಂದೆ ಕೊಂಡುಕೊಳ್ಳಲಾಗಿರುತ್ತದೆ. ಕೊಂಡುಕೊಂಡಿದ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಅಂದರೆ ಆ ಆಸ್ತಿಗಳು ಸರ್ವೆನಂಬರುಗಳು ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

4. ಅಜ್ಜನ ಆಸ್ತಿಗಳು ಸರ್ವೆ ನಂ : 15 ಬಿ/1 11 ಎಕರೆ 56 ಸೆಂಟ್ಸು, ಸರ್ವೆ ನಂ : 15 ಎ/ 1 ಎಕರೆ 49 ಸೆಂಟ್ಸು ಇವುಗಳು ಅಜ್ಜನ ಆಸ್ತಿಗಳು ಆಗಿರುತ್ತವೆ. ನನ್ನ ತಂದೆಗೆ ಇರುವ ಆಸ್ತಿಗಳು ಇವೇ ಆಗಿರುತ್ತವೆ. ಇವೆಲ್ಲ ಆಸ್ತಿಗಳ ಬಗ್ಗೆ 1968-69 ರ ಪಹಣಿ ಪತ್ರಗಳನ್ನು ಪರಿಶೀಲನೆ ಮಾಡಿ ನೋಡಿರುವ ಬಗ್ಗೆ ನನಗೆ ನೆನಪಿಲ್ಲ. ಸದ್ರಿ ಸರ್ವೆ ನಂ : 15 ಬಿ/1 ಮತ್ತು ಸರ್ವೆ ನಂ : 15 ಎ/1 ಕ್ಕೆ ಸಂಬಂಧಿಸಿದಂತೆ ಪಹಣಿಪತ್ರಗಳು ನಿಮ್ಮ ಅಜ್ಜನ ಹೆಸರಿನಲ್ಲಿ ಇತ್ತು ಎಂದು ತೋರಿಸಲು ದಾಖಾಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಅಂದರೆ ಇಲ್ಲ. (ಸಾಕ್ಷಿ ಮುಂದುವರೆದು ಅವು ನನ್ನ ತಂದೆಯ ಹೆಸರಿಗೆ ವರ್ಗಾವಣೆಗೊಂಡಿರುತ್ತವೆ.) ನನ್ನ ತಂದೆಯ ಹೆಸರಿಗೆ ನಾನು ತುಂಬಾ ಚಿಕ್ಕವನಿದ್ದಾಗ ಆಸ್ತಿಗಳು ವರ್ಗಾವಣೆಗೊಂಡಿರುತ್ತವೆ. ಯಾರಿಂದ ನಿಮ್ಮ ತಂದೆಗೆ ವರ್ಗಾವಣೆ ಆಗಿರುತ್ತದೆ ಅಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ ಆದರೆ ನನ್ನ ತಂದೆಯ ಹೆಸರಿನಲ್ಲಿ ಪಹಣಿ ಪತ್ರಿಕೆಗಳು ಇರುತ್ತವೆ. ನನ್ನ ತಂದೆಯ ಹೆಸರಿಗೆ ಆಸ್ತಿಗಳು ವರ್ಗಾವಣೆಗೊಂಡಿದ್ದಕ್ಕೆ ಮ್ಯುಟೇಶನ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಆದರೆ ಪಹಣಿ ಪತ್ರಗಳು ನನ್ನ ತಂದೆಯ ಹೆಸರಿಗೆ ಇದ್ದವು.

5. ನಾನು ಹಿರೆಕೊಳಚೆ ಗ್ರಾಮದಲ್ಲಿ ವಾಸವಾಗಿರುತ್ತೇನೆ. ನಮ್ಮ ಮನೆಯ ಡೋರ ನಂ : 29 ಹಿರೇಕೊಳಚೆ ಗ್ರಾಮದಲ್ಲಿ ಇರುತ್ತದೆ. ಅದರಲ್ಲಿ ನಾನು ವಾಸ ಮಾಡುತ್ತಿದ್ದೇನೆ. ಈ ಮನೆಯ ಡೋರ ನಂಬರ ಈಗ ನನ್ನ ತಂದೆಯ ಹೆಸರಿನಲ್ಲಿ ಇರುತ್ತದೆ. ನಾನು ನಮ್ಮೂರಿನಲ್ಲಿ ಮದುವೆಯಾಗಿರುತ್ತೇನೆ ನನ್ನ ಹೆಂಡತಿಯು ಸಹ ನಮ್ಮ ಊರಿನವಳೇ ಅಗಿರುತ್ತಾಳೆ. ಮದುವೆಯಾದ ನಂತರ ನಾನು ನನ್ನ ಅಣ್ಣ-ತಮ್ಮನ

ಮನೆಯಲ್ಲಿ ವಾಸವಾಗಿರುತ್ತೇನೆ. ಮದುವೆಯಾದನಂತರ ನಾನು ನನ್ನ ಹೆಂಡತಿಯ ಮನೆತನಕ್ಕೆ ಹೋಗಿದ್ದು ನಾನು ಅಲ್ಲಿಯೇ ವಾಸವಾಗಿರುತ್ತೇನೆಂದರೆ ಸರಿಯಲ್ಲ.

ಈ ಹಂತದಲ್ಲಿ ಪ್ರತಿವಾದಿಯರ ಪರ ವಕೀಲರು ಮುಂದುವರೆದ ಪಾಟಿ ಸವಾಲಿಗೆ ಸಮಯ ಕೋರಿದ್ದರಿಂದ ಅನುಮತಿಯ ಮೇರೆಗೆ ಕಾಲವಕಾಶವನ್ನು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ,

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹೂವಿನಹಡಗಲಿ.